ದಿನಚರಿ ಎಂಬ ಅಧ್ಯಾಯದ ಮೊದಲ ಸಾಲೇ 'ಬ್ರಾಹ್ಮೀ ಮುಹೂರ್ತೇ ಉತ್ತಿಷ್ಠೇ ಸ್ವಸ್ಥೋ ರಕ್ಷಾರ್ಥಂ ಆಯುಷ್ಯಃ' ಎಂದಿದೆ. ಹಾಗಾಗಿ ಬೆಳಗಿನ ಈ ಅವಧಿಯಲ್ಲಿ ನಿನ್ನ ಮಗನನ್ನು ಎಬ್ಬಿಸಿ ಓದಿಸಲು ಹಚ್ಚು ವಿದ್ಯೆಯೂ ಬೇಗ ತಲೆಗೆ ಹತ್ತುತ್ತದೆ; ಆರೋಗ್ಯವೂ ಚೆನ್ನಾಗಿರುತ್ತದೆ ಎಂದು ಅಮ್ಮನ ತಲೆಯಲ್ಲಿ ತುಂಬಿಬಿಟ್ಟಿದ್ದ. ಇದು ಕಾರಣವಾಗಿ ಎಸ್ಸೆಸ್ಸೆಲ್ಸಿ ಮುಗಿದು ಕಾಲೇಜಿಗೆಂದು ಊರು ಬಿಡುವವರೆಗೆ ನನಗೆ ಬೆಳ್ಳಂಬೆಳಗಿನ ಸಕ್ಕರೆನಿದ್ದೆಯೆಂಬುದು ಸಾಕ್ಷಾತ್ತು ಗಗನಕುಸುಮವೇ ಆಗಿಬಿಟ್ಟಿತು. ಕಾಲೇಜಿಗೆಂದು ಹಾಸ್ಟೆಲಿಗೆ ಸೇರಿದ ಮೇಲೆ ಪದವಿ ಮುಗಿಸುವವರೆಗೆ ನಾನು ನನಗಿಷ್ಟವಾದಂತೆ ರಾತ್ರಿ ಎರಡರವರೆಗೆ ಓದುವುದು, ಬೆಳಗ್ಗೆ ಎಂಟರವರೆಗೆ ಮಲಗುವುದನ್ನು ಮಾಡಿದ ಮೇಲೆಯೇ, ಈ ಸೈಕಲ್ ತಾತ ಬೆಳಗಿನ ಜಾವದ ಎಷ್ಟೊಂದು ಸಿಹಿಯಾದ ನಿದ್ದೆಗಳನ್ನು ಹಾಳು ಮಾಡಿದನಲ್ಲ ಎಂದು ಹಲ್ಲುಹಲ್ಲು ಕಡಿಯುವಂತಾಗಿತ್ತು. ಸೂರ್ಯಾಸ್ತದ ಅನಂತರವೇ ಮೆದುಳು ಚುರುಕಾಗಿ ಕೆಲಸ ಮಾಡುವಂಥ ಜನರಿಗೆ ನಾಕ್ಟರ್ನಲ್ ಎಂಬ ಪ್ರತ್ಯೇಕ ಹೆಸರೇ ಇದೆ ಮನಃಶಾಸ್ತ್ರದಲ್ಲಿ. ಓದಿದ್ದರೆ ತಾನೆ ಸೈಕಲ್ ತಾತ? ಕಿತ್ತೋಗಿರುವ ಕಾಲಜ್ಞಾನ ಹೇಳುತ್ತ ಕಥಾಕಾಲಕ್ಷೇಪ ನಡೆಸಿರುವ ಅವನು ಓಬೀರಾಯನ ಕುಲದ ಔಟ್‌ಡೇಟೆಡ್ ಭೂತ!

